# ಋತುಮತಿ ಬಿಡು ಬಿಡು

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 92.
2. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Prof. S.K. Ramachandra Rao and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.
3. **Note:** Singer has followed these lyrics.

ರಾಗ: ಯರಕಲ ಕಾಂಭೋಜಿ ತಾಳ: ಅಟ

ಋತುಮತಿ ಬಿಡು ಬಿಡು ಸೆರಗ, ನೀ
ಋತುವಾದರೆ ನಾ ರತಿ ಕೊಡ ಬರುವೆ,
ಅಣ್ಣಯ್ಯ ಕೃಷ್ಣ ಬಿಡೊ ಸೆರಗ, ನಾ
ಅಣ್ಣನಲ್ಲವೆ, ನಿನ್ನ ಅಣ್ಣನ ಭಾವ || ೧ ||

ಭಾವಯ್ಯ ಕೃಷ್ಣ ಬಿಡೊ ಸೆರಗ, ನಾ
ಭಾವನಲ್ಲವೆ, ನಿನ್ನ ಭಾವನ ತಮ್ಮ,
ತಮ್ಮಯ್ಯ ಕೃಷ್ಣ ಬಿಡೊ ಸೆರಗ, ನಾ
ತಮ್ಮನಲ್ಲವೆ, ನಿನ್ನ ತಮ್ಮನ ಬೀಗ || ೨ ||

ಬೀಗಯ್ಯ ಕೃಷ್ಣ ಬಿಡೊ ಸೆರಗ, ನಾ
ಬೀಗನಲ್ಲವೆ, ನಿನ್ನ ಬೀಗನ ಬೀಗ,
ಮಾವಯ್ಯ ಕೃಷ್ಣ ಬಿಡೊ ಸೆರಗ, ನಾ
ಮಾವನಲ್ಲವೆ, ನಿನ್ನ ಮಾವನ ಮಗನು || ೩ ||

ಕಂದಯ್ಯ ಕೃಷ್ಣ ಬಿಡೊ ಸೆರಗ, ನಾ
ಕಂದನಲ್ಲವೆ ನಿನ್ನ ಕಂದನ ತಂದೆ,

ಗಂಡಯ್ಯ ಕೃಷ್ಣ ಬಿಡೊ ಸೆರಗ, ನಾ
ಗಂಡನಲ್ಲವೆ, ನಿನ್ನ ಗಂಡನ ಮಿಂಡ || ೪ ||

ಅರಸಯ್ಯ ಕೃಷ್ಣ ಬಿಡೊ ಸೆರಗ, ನಾ
ಅರಸನಲ್ಲವೆ, ನಿನ್ನ ಸರಸಕ್ಕೆ ಬಂದೆ,
ಗೊಲ್ಲರ ಗೋಕುಲದೊಳಗೆ ಎನ್ನ
ಪುಲ್ಲಲೋಚನ ಶ್ರೀ ಪುರಂದರ ವಿಠಲ || ೫ ||

**Classification:** Keerthane
**Ankita:** sri purandara vittala
**Location:** NA
**Category:** Krishna Stuti
**Sub-Category:** Krishna, gopi, maga, putra, pati, arasa, gokula,
**Pravachana:** NA
**Explanation:** NA